# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 Volume:01 • ಸಂಚಿಕೆ:157 Issue:157 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 14.11.2023 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



With Your support we reach 100000 HAMPI TIMES E-PAPER VIEWS

PRINT & DIGITAL Advertisement
Valmiki Circle, Hosapete-583201
9448633038
hampitimes@gmail.com
www.hampitimes.com
epaper.hampitimes.com
Thank You

T.M.A.E.S.
RESIDENTIAL PU COLLEGE
SCIENCE - PCMB / PCMC
COMMERCE -EBAS / EBACs / BASCs
Call Now for more information:
9483510530, 6366437712

We are Good at
- Having dynamic and experience faculties
- Best Study Material
- Regualar Mock Test & Assignments

Fecilities
- Separate Hostel Facility for Boys & Girls with hygienic food
- Mentoring System for holystic progress of Child
- Transport facility available

DAV Campus Sanklapur Ballari Road Hosapete-583201

In Collaboration with Avanti
IIT-JEE | NEET | Foundation


## ಮೈಕ್ರೋ ನ್ಯೂಸ್

### ಕಚೇರಿಗೆ ಬಿಡುವು

### ಬೆಳಕಿನ ಹಬ್ಬ ದೀಪಾವಳಿ ಶುಭಾಶಯಗಳು

ಹಂಪಿ ಟೈಮ್ಸ್ ಪತ್ರಿಕೆ ಕಾರ್ಯಾಲಯಕ್ಕೆ ನ.14 ಮಂಗಳವಾರ ದೀಪಾವಳಿ ಹಬ್ಬದ ನಿಮಿತ್ತ ಬಿಡುವು ಇರುವುದರಿಂದ ಬುಧವಾರ 15 ನವೆಂಬರ್ 2023 ರ ಸಂಚಿಕೆ ಪ್ರಕಟವಾಗುವುದಿಲ್ಲ.

ಹಂಪಿ ಟೈಮ್ಸ್ ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ, ಪತ್ರಿಕೆ ವಿತರಕರಿಗೆ, ಲೇಖಕರಿಗೆ, ಪತ್ರಿಕೆಯ ಹಿತೈಷಿಗಳಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

– ಹಂಪಿ ಟೈಮ್ಸ್ ಬಳಗ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ದೇವಸ್ಥಾನದ ಆಡಳಿತ ಕಛೇರಿ ಕಾರ್ಯಾರಂಭ

## ಸಹಾಯಕ ಆಯುಕ್ತರಾದ ಗಂಗಾಧರ ಹೇಳಿಕೆ | ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪ್ರತೀ ಅಮವಾಸೆಗೆ ಅನ್ನಸಂತರ್ಪಣೆ

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕಿನ ಮರಿಯಮ್ಮನಹಳ್ಳಿ ಪಟ್ಟಣದ ಶ್ರೀ ಆಂಜನೇಯಸ್ವಾಮಿ ಹಾಗೂ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಆವರಣದಲ್ಲಿ ದೀಪಾವಳಿ ಅಮವಾಸೆಯ ಅಂಗವಾಗಿ ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯಗಳ ಇಲಾಖೆ ವತಿಯಿಂದ ಸೋಮವಾರ ಅನ್ನಸಂತರ್ಪಣೆ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮಕ್ಕೆ ಇಲಾಖೆಯ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ ಸಹಾಯಕ ಆಯುಕ್ತರಾದ ಗಂಗಾಧರ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ದೇವಸ್ಥಾನದ ಆಡಳಿತ ಕಛೇರಿಯನ್ನು ಇಂದಿನಿಂದ ಆರಂಭಿಸಲಾಗಿದೆ. ಭಕ್ತರು ಕಾಣಿಕೆ, ದೇಣಿಗೆ ನೀಡಿ ರಶೀದಿಗಳನ್ನು ಪಡೆಯಬಹುದಾಗಿದೆ. ಮುಂದಿನ ದಿನಮಾನಗಳಲ್ಲಿ ಶ್ರೀಸ್ವಾಮಿಯ ವಿಶೇಷ ಪೂಜೆ ಹಾಗೂ ನಿರಂತರ ಪೂಜಾ ವಿವಿಧ ಸೇವೆಗಳ ಆರಂಭಿಸಲಾಗುವುದು.



ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಪಟ್ಟಣದ ಶ್ರೀ ಆಂಜನೇಯಸ್ವಾಮಿ ಹಾಗೂ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಆವರಣದಲ್ಲಿ ಅಮವಾಸೆಯ ಅಂಗವಾಗಿ ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯಗಳ ಇಲಾಖೆ ವತಿಯಿಂದ ಅನ್ನಸಂತರ್ಪಣೆ ಕಾರ್ಯಕ್ರಮ ಜರುಗಿತು.

ಪ್ರತೀ ತಿಂಗಳು ನಡೆಯುವ ಅನ್ನದಾಸೋಹ ಕಾರ್ಯಕ್ರಮಕ್ಕೆ ಭಾಗಶಃ ಧವಸದಾನ್ಯಗಳನ್ನು ಅಥವಾ ಕಾಣಿಕೆಗಳನ್ನು ನೀಡಲು ಬಯಸುವವರು ದೇವಸ್ಥಾನದ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಿ ಕಾಣಿಕೆಗಳನ್ನು ನೀಡಿ ರಶೀದಿ ಪಡೆಯಬಹುದಾಗಿರುತ್ತದೆ. ಪೂರ್ಣಪ್ರಮಾಣದ ಅನ್ಮದಾಸೋಹಕ್ಕೆ ಮುಂದಾಗುವ ಭಕ್ತಾದಿಗಳು ಆಡಳಿತಾಧಿಕಾರಿಗಳನ್ನು ಸಂಪರ್ಕಿಸಿ ಮುಂಗಡ ದಿನಾಂಕಗಳನ್ನು ಮುಂಚಿತವಾಗಿಯೇ ನಿಗದಿಪಡಿಸಿಕೊಂಡು ದೇವರ ಕೃಪೆಗೆ ಪಾತ್ರರಾಗಬೇಕೆಂದು ಸದ್ಭಕ್ತರಲ್ಲಿ ಮನವಿ ಮಾಡಿದರು.

ಅನ್ನದಾಸೋಹಕ್ಕೆ ಪೂರ್ಣಪ್ರಮಾಣದ ದೇಣಿಗೆ ಹಾಗೂ ಭಾಗಶಃ ದೇಣಿಗೆ ಹಾಗೂ ಧವಸಧಾನ್ಯಗಳನ್ನು ನೀಡುವವರು ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆ ಸಹಾಯಕ ಆಯುಕ್ತರಾದ ಗಂಗಾಧರ– 94819 89423, ಹಾಗೂ ಮರಿಯಮ್ಮನಹಳ್ಳಿ ಉಪತಹಸೀಲ್ದಾರರು ದೇವಸ್ಥಾನದ ಆಡಳಿತಾಧಿಕಾರಿಗಳಾದ ನಾಗರಾಜ ಹೆಚ್.– 99169 62958 ಇವರಿಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತಾಧಿಕಾರಿ ನಾಗರಾಜ ಹೆಚ್, ಮುಖಂಡರಾದ ಚಿದ್ರಿ ಸತೀಶ್, ದೊಡ್ಡರಾಮಣ್ಣ, ಉರವಕೊಂಡ ವೆಂಕಟೇಶ್ , ಕೆ.ರಘುವೀರ, ಎಲಿಗಾರ್ ಮಂಜುನಾಥ ಪ್ರಕಾಶ್ ನಾಯ್ಕ, ಉಪಸ್ಥಿತರಿದ್ದರು.

# ನ.20ರಂದು ಜಿಲ್ಲಾ ಮಟ್ಟದ ಅಪ್ರೆಂಟಿಶಿಪ್ ಮೇಳ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಜಿಲ್ಲಾ ಮಟ್ಟದ ಅಪ್ರೆಂಟಿಶಿಪ್ ಮೇಳವನ್ನು ನ.20ರಂದು ಬೆಳಿಗ್ಗೆ 10 ಗಂಟೆಯಿಂದ ಹಗರಿಬೊಮ್ಮನಹಳ್ಳಿಯ ವಿಧಾನ ಸೌಧದ ಹತ್ತಿರವಿರುವ ಸರ್ಕಾರಿ ಐಟಿಐ ಕಾಲೇಜಿನಲ್ಲಿ ನಡೆಯಲಿದೆ.

ಈ ಮೇಳದಲ್ಲಿ ಉದ್ದಿಮೆದಾರರು ಮತ್ತು ಬೆಂಗಳೂರಿನ ಪ್ರತಿಷ್ಠಿತ ಎಂ.ಎನ್.ಸಿ ಕಂಪನಿಗಳು ಭಾಗವಹಿಸಲಿದ್ದು, ವಿಜಯನಗರ ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಅಥವಾ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರು ತಮ್ಮ ಸಿಬ್ಬಂದಿಗಳೊಂದಿಗೆ ಭಾಗವಹಿಸಬೇಕು. ಶಿಶಿಕ್ಷು ತರಬೇತಿ ನೋಂದಣಿಗಾಗಿ ಐ.ಟಿ.ಐ ಪಾಸಾದ ಮತ್ತು ಫಲಿತಾಂಶ ನೀರಿಕ್ಷೆಯಲ್ಲಿರುವ ಆಸಕ್ತ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ತಪ್ಪದೇ ಹಾಜರಾಗಬೇಕು ಎಂದು ಸಂಸ್ಥೆಯ ಪ್ರಭಾರ ಪ್ರಾಚಾರ್ಯರು ಹಾಗೂ ಶಿಶಿಕ್ಷು ನೋಡಲ್ ಅಧಿಕಾರಿ ಮೊಹನ ಮುರಾಳ ತಿಳಿಸಿದ್ದಾರೆ.







## ಸ್ವಚ್ಛ ದೀಪಾವಳಿ ಶುಭ ದೀಪಾವಳಿ ಅಭಿಯಾನ; ಪರಿಸರ ಸ್ನೇಹಿ ದೀಪಾವಳಿ ಹಬ್ಬ ಆಚರಿಸುವಂತೆ ಮನವಿ

**ಹಂಪಿ ಟೈಮ್ಸ್ ಕಂಪ್ಲಿ:**

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ಪರಿಸರ ಸ್ನೇಹಿ ದೀಪಾವಳಿ ಹಬ್ಬವನ್ನು ಆಚರಿಸಬೇಕು ಎಂದು ಪುರಸಭೆಯ ಮುಖ್ಯಾಧಿಕಾರಿ ಕೆ.ದುರುಗಣ್ಣ ಅವರು ತಿಳಿಸಿದ್ದಾರೆ.

ದೀಪಾವಳಿ ಹಬ್ಬ ಆಚರಿಸುವ ಸಮಯದಲ್ಲಿ ವಿವಿಧ ರೀತಿಯ ಪಟಾಕಿಗಳನ್ನು ಸ್ಫೋಟಿಸುವುದರಿಂದ ಉಂಟಾಗುವ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯದಿಂದ ಸಾರ್ವಜನಿಕರ ಆರೋಗ್ಯ ಮೇಲೆ ತೀವ್ರ ಪರಿಣಾಮ ಉಂಟಾಗುವುದನ್ನು ತಡೆಗಟ್ಟಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿರ್ದೇಶನ ನೀಡಿದೆ.

ಪಟ್ಟಣದಲ್ಲಿ ಹಸಿರು ಪಟಾಕಿಯಲ್ಲದೇ ಇನ್ನಾವುದಾದರೂ ಪಟಾಕಿಗಳ ದಾಸ್ತಾನು ಮತ್ತು ಮಾರಾಟ ಕಂಡು ಬಂದಲ್ಲಿ ತಹಶೀಲ್ದಾರರು, ಪೋಲಿಸ್ ಅಧಿಕಾರಿಗಳು ಹಾಗೂ ಪುರಸಭೆಗೆ ಮಾಹಿತಿ ನೀಡಬೇಕು. ದೀಪಾವಳಿ ಹಬ್ಬದ ಆಚರಣೆ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಉಪಯೋಗಿಸಬೇಕು ಹಾಗೂ ಇವುಗಳನ್ನು ಬಳಸುವಾಗ ಯಾವುದೇ ಪ್ರಾಣಿ, ಪಕ್ಷಿ, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆಯಾಗದಂತೆ ಬಳಸಬೇಕು.

ಸ್ಥಳೀಯ ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳ ಸುತ್ತಮುತ್ತಲು ನಿಷೇಧಿತ ಪಟಾಕಿಗಳನ್ನು ಸ್ಫೋಟಿಸುವುದನ್ನು ನಿಷೇಧಿಸಲಾಗಿದೆ. ದೀಪಾವಳಿ ಹಬ್ಬ ಸಮಯದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಪುರಸಭೆ ವಾಹನಗಳಿಗೆ ನೀಡಬೇಕು ಎಂದು ಅವರು ತಿಳಿಸಿದ್ದಾರೆ.

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ಪರಿಸರ ಸ್ನೇಹಿ ದೀಪಾವಳಿಯನ್ನು ಆಚರಿಸಲು ಸ್ವಚ್ಛ ದೀಪಾವಳಿ ಶುಭ ದೀಪಾವಳಿ ಅಭಿಯಾನದ ನಿರ್ದೇಶನದಂತೆ https://pledge.mygov.in/swachh-diwali-shubh-diwali/ ರ ಲಿಂಕ್ ಕ್ಲಿಕ್ ಮಾಡಿ ನಿಯಮಾನುಸಾರ ದೀಪಾವಳಿ ಹಬ್ಬವನ್ನು ಆಚರಿಸಿ, ಪ್ರಮಾಣ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಪ್ರಮಾಣ ಪತ್ರಗಳನ್ನು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆರೋಗ್ಯ ಇಲಾಖೆಯ ವಿವಿಧ ಕಾರ್ಯಕ್ರಮಗಳ ಉದ್ಘಾಟನೆ ನ.15ರಂದು

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಾದ್ಯಂತ ಸಮಗ್ರ ಮಕ್ಕಳ ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ, 2023–24ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಎನ್‌ಎನ್‌ಡಬ್ಲ್ಯೂ–ರಾಷ್ಟ್ರೀಯ ನವಜಾತ ಶಿಶು ಸಪ್ತಾಹ ಕಾರ್ಯಕ್ರಮ (ನ.15ರಂದು 21ರವರೆಗೆ), ಐಡಿಸಿಎಫ್–ತೀವ್ರ ಅತಿಸಾರ ಭೇದಿ ನಿಯಂತ್ರಣ ಪಾಕ್ಷಿಕ ಕಾರ್ಯಕ್ರಮ (ನ.15ರಿಂದ ನ.28ರವರೆಗೆ), ಎಸ್‌ಎಎಎನ್– ನ್ಯುಮೋನಿಯಾ ಕೊನೆಗೊಳಿಸಲು ಸಾಮಾಜಿಕ ಜಾಗೃತಿ ಹಾಗೂ ಕ್ರಿಯೆ 2023 (ನ.15ರಿಂದ 2024ರ ಫೆ.29ರವರೆಗೆ) ಮತ್ತು ಎಎಂಪಿಕೆ–ಅನೀಮಿಯ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ರಮ (ನ.15ರಿಂದ ಡಿ.08ರವರೆಗೆ) ಸೇರಿದಂತೆ ಎಲ್ಲಾ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವನ್ನು ನ.15ರಂದು ಬೆಳಿಗ್ಗೆ 10 ಗಂಟೆಗೆ ದೇವಿನಗರದ ಮೇದಾರ್ ವಾಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ ಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

**ಓದುಗರ ಗಮನಕ್ಕೆ**

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಎಲ್ಲವೂ ಪರರ ಪಾಲು...

## ಅನುಪಮ ಶರಣ ದಂಪತಿಗಳು.... ಮೋಳಿಗೆಯ ಮಾರಯ್ಯ ಮತ್ತು ಮಹಾದೇವಿ



ಅದು ಕಲ್ಯಾಣದ ವಚನ ಚಳುವಳಿಯ ಉತ್ತುಂಗದ ಕಾಲ. ಕಾಯಕ, ದಾಸೋಹ ಮತ್ತು ಅನುಭಾವಗಳು ಜನರ ಬದುಕಿನ ಭಾಗವಾಗಿದ್ದವು. ಅಕ್ಷರಸ್ಥರಲ್ಲದವರು ಕೂಡ ಸಾಕ್ಷರರಾದಂತಹ ಕಾಲ. ನಿರಕ್ಷರಿಗಳು ಕೂಡ ವಚನಗಳನ್ನು ರಚಿಸಿದಂತಹ ಕಾಲ. ತನ್ನ ಅನುಭವದ ನುಡಿಗಳನ್ನು ಅನುಭಾವಕ್ಕೆ ಇಳಿಸಿದ ಈ ಸಮಯದಲ್ಲಿ ಕಲ್ಯಾಣದ ಕೀರ್ತಿ ಜಗದಗಲ ಹರಡಿತ್ತು. ಎಲ್ಲೆಡೆ ಬಸವಣ್ಣನವರ ಗುಣಗಾನ ಅವರ ಸಾಮಾಜಿಕ ಕ್ರಾಂತಿಕಾರಕ ವಿಚಾರಧಾರೆಗಳು ಮತ್ತು ವಚನ ಸಾಹಿತ್ಯದ ಚಟುವಟಿಕೆಗಳು ಅನುಭವ ಮಂಟಪದ ವಿಷಯಗಳು ಮನೆಮನೆಗಳನ್ನು ತಲುಪಿದ್ದವು.

ಇತ್ತ ದೇಶದ ಉತ್ತರ ಭಾಗದ ಹಿಮಾಲಯ ಧವಳ ಕಿರೀಟ ಹೊತ್ತ ನಾಡು ಕಾಶ್ಮೀರದಲ್ಲಿ ಕೂಡ ಬಸವಣ್ಣನವರ ಖ್ಯಾತಿ ಹರಡಿತ್ತು. ಧರೆಗಿಳಿದ ಸ್ವರ್ಗ ಎಂದೇ ಖ್ಯಾತವಾದ ಕಾಶ್ಮೀರದ ಸವಾಲಾಕ್ಷ ಪ್ರದೇಶದ ಮಾಂಡವ್ಯಪುರವನ್ನು ಆಳುತ್ತಿದ್ದ ರಾಜ ಮಹಾದೇವ ಭೂಪಾಲ ಮಹಾನ್ ಶಿವ ಭಕ್ತನಾಗಿದ್ದನು. ಪ್ರತಿದಿನವೂ ಆತ ತನ್ನ ರಾಜಧಾನಿಯಲ್ಲಿ 6 ಸಾವಿರಕ್ಕೂ ಹೆಚ್ಚು ಶಿವ ಗಣಗಳಿಗೆ ಅನ್ನದಾಸೋಹ ನಡೆಸುತ್ತಿದ್ದನು. ಆತನ ಈ ಕೈಂಕರ್ಯದಲ್ಲಿ ಪತ್ನಿ ಗಂಗಾಂಬಿಕೆ ತನ್ನ ಅಹರ್ನಿಶಿ ಸೇವೆಯನ್ನು ಸಲ್ಲಿಸುತ್ತಿದ್ದಳು. ಸತಿಪತಿಗಳೊಂದಾದ ಭಕ್ತಿಯು ಹಿತವಪ್ಪುದು ಶಿವಂಗೆ ಎನ್ನುವಂತೆ ಇವರೀರ್ವರ ದಾಸೋಹ ಸೇವೆಗೆ ಮೆಚ್ಚಿ ಸಾವಿರಾರು ಜನ ಪ್ರತಿದಿನ ರಾಜಧಾನಿಯಲ್ಲಿ ದಾಸೋಹವನ್ನು ಸ್ವೀಕರಿಸುತ್ತಿದ್ದರು.

ಆದರೆ ಏನಾಶ್ಚರ್ಯ!! ಇದ್ದಕ್ಕಿದ್ದಂತೆ ದಾಸೋಹಕ್ಕೆ ಬರುತ್ತಿದ್ದ ಜನಗಳು ಕಡಿಮೆಯಾಗಹತ್ತಿದರು. ಕೊನೆಗೊಂದು ದಿನ ದಾಸೋಹ ಸೇವೆ ನಿಲ್ಲುವಂತಾಗುವ ಪರಿಸ್ಥಿತಿ ಬಂದಾಗ, ಅರಮನೆಯ ಅಧಿಕಾರಿಗಳು ಮಹಾರಾಜನಲ್ಲಿ ಬಂದು ಈ ವಿಷಯವನ್ನು ಅರುಹಿದರು. ರಾಜನು ಚಿಂತಾಕ್ರಾಂತನಾಗಿ ಇದರ ಕಾರಣವನ್ನು ಹುಡುಕಿದಾಗ ಆತನಿಗೆ ದೊರೆತು ಬಂದ ಮಾಹಿತಿ ಎಂದರೆ ದಕ್ಷಿಣದ ಕಲ್ಯಾಣ ಚಾಲುಕ್ಯ ಅರಸರ ಸಾಮಂತನಾದ ಕಲಾಚೂರ್ಯ ವಂಶದ ಬಿಜ್ಜಳ ಮಹಾರಾಜನ ಮಹಾಮಂತ್ರಿ ಬಸವಣ್ಣನವರು ಕಲ್ಯಾಣದಲ್ಲಿ ನಡೆಸುತ್ತಿದ್ದ ಮಹಾಮಣಿಹದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಕಲ್ಯಾಣಕ್ಕೆ ವಲಸೆ ಹೋಗಿರುವುದಾಗಿ ತಿಳಿದು ಬಂತು. ಅಲ್ಲಿ ಒಂದು ಲಕ್ಷ ಅರವತ್ತು ಸಾವಿರಕ್ಕೂ ಮೀರಿದ ಗಣಂಗಳಿಗೆ ಪ್ರತಿದಿನ ದಾಸೋಹ ವ್ಯವಸ್ಥೆಯಾಗುವುದನ್ನು ಅರಿತ ಮಹಾರಾಜನು ಆಶ್ಚರ್ಯಚಕಿತನಾದನು. ಮುಂದೆ ಕೆಲವೇ ದಿನಗಳಲ್ಲಿ ಚಾರರಿಂದ ಮಾಹಿತಿಯನ್ನು ಸಂಗ್ರಹಿಸಿದ ಮಹಾರಾಜನು ಬಸವಣ್ಣನವರ ಕಾಯಕ, ದಾಸೋಹ ಮತ್ತಿತರ ಕ್ರಾಂತಿಕಾರಕ ಕಾರ್ಯಗಳು ಮಾಡಿರುವ ಪರಿಣಾಮಗಳ ಸೆಳವಿಗೆ ಒಳಗಾಗಿ ತಾನು ಕೂಡ ಬಸವಣ್ಣನವರ ಬಳಿ ಹೋಗಲು, ಅಲ್ಲಿಯೇ ಜೀವಿತದ ಉಳಿದ ಭಾಗವನ್ನು ಕಳೆಯಲು ಆಶಿಸಿದನು. ಭೂಲೋಕದ ಸ್ವರ್ಗ ಎಂಬ ಹೆಸರನ್ನು ಪಡೆದ ತನ್ನ ರಾಜಧಾನಿಯನ್ನು, ಅರಮನೆಯ ವೈಭೋಗಗಳನ್ನು, ಸಿರಿಸಂಪತ್ತನ್ನು ತೊರೆದು ತನ್ನ ಮಗ ಲಿಂಗಾರತಿಗೆ ರಾಜನ ಪಟ್ಟಗಟ್ಟಿ ಹೊರಟು ನಿಂತನು. ತನ್ನೊಂದಿಗೆ ಹೊರಟು ನಿಂತ ಪತ್ನಿಯನ್ನು ಮಗನೊಂದಿಗೆ ಅಲ್ಲಿಯೇ ಇರುವಂತೆ ಒತ್ತಾಯಿಸಿದ ಮಹಾರಾಜನು ಅರಮನೆಯ ಸುಖ ಭೋಗಗಳನ್ನು ಮರೆತು ಇರಲು ನಿನಗೆ ಸಾಧ್ಯವಿಲ್ಲ, ವಯಸ್ಸಾದ ಈ ಕಾಲದಲ್ಲಿ ಅರಮನೆಯಲ್ಲಿಯೇ ಮಗನ ಜೊತೆ ಕಾಲ ಕಳೆ ಎಂದು ಪತ್ನಿಗೆ ಹೇಳಿದನು. ಅದಕ್ಕೆ ಒಪ್ಪದ ಪತ್ನಿ ಗಂಗಾಂಬಿಕೆ ಪತಿಯ ನೆರಳಲ್ಲಿಯೇ ಸತಿಗೆ ಸುಖವಿಹುದು ಎಂದು ಹೇಳಿ ಆತನೊಂದಿಗೆ ತಾನು ಹೊರಟು ನಿಂತಳು.

ಕಲ್ಯಾಣಕ್ಕೆ ಬಂದು ಅನುಭವ ಮಂಟಪದಲ್ಲಿ ಬಸವಾದಿ ಪ್ರಮಥರನ್ನು ಕಂಡು ಸಹರ್ಷದಿಂದ ತಾವು ಕಾಯಕ ಜೀವಿಗಳಾಗಿದ್ದುಕೊಂಡು ಕಲ್ಯಾಣದಲ್ಲಿಯೇ ನೆಲೆಸುವುದಾಗಿ ಹೇಳಿದ ಮಹದೇವ ಭೂಪಾಲನು ತನ್ನ ಹೆಸರನ್ನು ಮಾರಯ್ಯ ಎಂದು ಬದಲಾಯಿಸಿಕೊಂಡನು. ಪತ್ನಿ ಮಹಾದೇವಿಯಾದಳು. ಕಟ್ಟಿಗೆ ಕಡಿದು ಮಾರುವ ಕಾಯಕವನ್ನು ತನ್ನ ವೃತ್ತಿಯನ್ನಾಗಿಸಿಕೊಂಡನು.

ಕಾಡಿನಲ್ಲಿರುವ ಒಣಗಿದ ಮರಗಳನ್ನು ಮಾತ್ರ ಕಡಿದು ಅವುಗಳನ್ನು ಹೊರೆ (ಹೊರೆಯನ್ನು ಮೋಳಿಗೆ ಎಂದು ಕರೆಯುತ್ತಾರೆ) ಮಾಡಿ ತರುತ್ತಿದ್ದನು ಮಾರಯ್ಯ. ನಂತರ ಪ್ರತಿ ಪತ್ನಿಯರಿಬ್ಬರೂ ಅವುಗಳನ್ನು ವಿಂಗಡಿಸಿ ದೊಡ್ಡ ಸಣ್ಣ ಹೊರೆಗಳನ್ನಾಗಿ ಮಾಡಿ ಅವುಗಳನ್ನು ಕಲ್ಯಾಣದ ಬೀದಿಗಳಲ್ಲಿ ಮನೆ ಮನೆಗೆ ಹೊತ್ತು ಮಾರಿ ಬಂದ ಹಣದಲ್ಲಿ ಮನೆಯನ್ನು ನಿಭಾಯಿಸುತ್ತಿದ್ದರು. ಬೆಳಗಿನ ಜಾವದಲ್ಲಿ ಎದ್ದು ನಿತ್ಯ ಕರ್ಮಗಳನ್ನು ಪೂರೈಸಿ ಸ್ನಾನ ಮತ್ತು ಲಿಂಗ ಪೂಜೆಯ ನಂತರ ಆಹಾರ ಸ್ವೀಕರಿಸಿ ನಂತರ ಕಟ್ಟಿಗೆ ಕಡಿದು ತಂದು ಮಾರುವ ಕಾರ್ಯ ಮಾಡಿದರೆ ಪ್ರತಿದಿನ ಸಂಜೆಯ ಸಮಯದಲ್ಲಿ ಅನುಭವ ಮಂಟಪದಲ್ಲಿ ಶರಣ ಬಂಧುಗಳೊಂದಿಗೆ ಸೇರಿ ಭಕ್ತಿ ಜ್ಞಾನ ವೈರಾಗ್ಯ ಕುರಿತಾದ ಹಲವಾರು ವಿಷಯಗಳನ್ನು ಚರ್ಚೆಯ ಮುನ್ನೆಲೆಗೆ ತಂದು ಚರ್ಚಿಸುವ ಮೂಲಕ ತಮ್ಮ ಅನುಭಾವವನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

ಮೋಳಿಗೆ ಮಾರಯ್ಯನವರು ವಿವಿಧ ಭಾಷೆಗಳಲ್ಲಿ ಪ್ರಕಾಂಡ ಪಂಡಿತರಾಗಿದ್ದರು. ಕನ್ನಡವನ್ನು ಮಾತನಾಡಲು,ಓದಲು, ಬರೆಯಲು ಕಲಿತು ಕನ್ನಡದಲ್ಲಿ ಸುಮಾರು 818 ವಚನಗಳನ್ನು ಅವರು ರಚಿಸಿದರು. ನಿಃಕಳಂಕ ಮಲ್ಲಿಕಾರ್ಜುನ ಎಂಬುದು ಅವರ ವಚನದ ಅಂಕಿತ ನಾಮವಾಗಿತ್ತು. ಪತ್ನಿ ಮಹಾದೇವಿ ಕೂಡ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದಳು. ಮನುಷ್ಯ ತನ್ನಲ್ಲಿರುವ ಅರಿ ಷಡ್ವರ್ಗಗಳನ್ನು ಹಿಡಿತದಲ್ಲಿಟ್ಟುಕೊಂಡರೆ ಅದೇ ಷಟ್ ಸ್ಥಳ ಅವರೋಹಣ ಮಾಡಿದಂತೆ ಎಂಬುದು ಮಾರಯ್ಯನವರ ಅಭಿಪ್ರಾಯವಾಗಿತ್ತು. ಮಾರಯ್ಯನವರ ಕುರಿತು ತೆಲುಗಿನ ಬಸವ ಪುರಾಣದಲ್ಲಿ ಉಲ್ಲೇಖಗಳು ಇವೆ.

ಕನ್ನಡದಲ್ಲಿ ಬಸವ ಪುರಾಣ, ಶಿವ ತತ್ವ ಚಿಂತಾಮಣಿ, ವೀರಶೈವಾಮೃತ ಮಹಾಪುರಾಣ, ವೃಷಭೇಂದ್ರ ವಿಜಯ, ರಾಘವಾಂಕನ ಚರಿತೆ, ಶರಣ ಲೀಲಾಮೃತ, ಬೋರಬಸವ ಪುರಾಣ, ಭೈರವೇಶ್ವರ ಪುರಾಣದ ಕಥಾಮಣಿ ಸೂತ್ರ ರತ್ನಾಕರ ಮುಂತಾದ ಪುರಾಣಗಳಲ್ಲಿ ಇವರ ಕುರಿತು ವಿವರಗಳಿವೆ. ಕ್ರಿಸ್ತಶಕ 1525ರಲ್ಲಿ ಹೊನ್ನಳ್ಳಿಯ ಗೌರಾಂಕ ಕವಿಯು ಈತನನ್ನು ಕುರಿತು 'ಮೋಳಿಗಯ್ಯನ ಪುರಾಣ' ಎಂಬ ಕಾವ್ಯವನ್ನು ಬರೆದಿದ್ದಾನೆ. ಅಲ್ಲಮ ಪ್ರಭುಗಳು ರಚಿಸಿದ ಶೂನ್ಯ ಸಂಪಾದನೆಯಲ್ಲಿ 'ಮೋಳಿಗಯ್ಯನ ಸಂಪಾದನೆ' ಎಂಬ ಭಾಗವಿದೆ.

ತಾತ್ವಿಕ, ಧಾರ್ಮಿಕ, ಸಾಮಾಜಿಕ, ವಿಡಂಬನಾತ್ಮಕ ಹೀಗೆ ವೈವಿಧ್ಯಮಯವಾದ ವಿಷಯಗಳನ್ನು ಕುರಿತ ಮೋಳಿಗಯ್ಯನವರ ವಚನಗಳು ಅವರ ವಿದ್ವತ್ತು ಮತ್ತು ಅನುಭಾವದ ಹಿರಿಮೆಯನ್ನು ತೋರಿಸುತ್ತವ. ಷಟ್ ಸ್ಥಲ ಸಿದ್ಧಾಂತದ ಕುರಿತು ಅವರು ಹೇಳಿರುವ ವಚನಗಳು ಇಂದಿಗೂ ಪ್ರಸ್ತುತವಾಗಿವೆ.

ಕಲ್ಯಾಣದ ಕ್ರಾಂತಿಯ ಮುನ್ನ ಬಸವಣ್ಣನವರು ಕೂಡಲಸಂಗಮಕ್ಕೆ ತೆರಳಿದರೆ, ಕಲ್ಯಾಣ ಕ್ರಾಂತಿಯ ನಂತರ ಚೆನ್ನಬಸವಣ್ಣನವರ ನೇತೃತ್ವದಲ್ಲಿ ಉಳಿದವರು ವಚನ ಸಾಹಿತ್ಯವನ್ನು ರಕ್ಷಿಸುವ ಸಲುವಾಗಿ ಉಳವಿಯತ್ತ ಪಯಣ ಬೆಳೆಸಿದರು. ಆದರೆ ಕಲ್ಯಾಣದಲ್ಲಿಯೇ ಉಳಿದು ಹೋದ ಮೋಳಿಗೆಯ ಮಾರಯ್ಯನವರು 'ಊರು ಕೆಟ್ಟು ಸೂರೆ ಮಾಡುವಲ್ಲಿ ಯಾರಿಗಾರೂ ಇಲ್ಲ'.... ಎಂದು ತನ್ನೊಂದಿಗೆ ಕಲ್ಯಾಣದಲ್ಲಿ ಯಾರೂ ಉಳಿದುಕೊಂಡಿಲ್ಲ ಎಂದು ನಿಟ್ಟುಸಿರಿಟ್ಟರು.

ಮುಂದೆ ಹಲವಾರು ವರ್ಷಗಳ ಕಾಲ ಬದುಕಿದ ಮೋಳಿಗೆಯ ಮಾರಯ್ಯನವರು ಬೀದರ ಜಿಲ್ಲೆಯ ಬಸವಕಲ್ಯಾಣದಿಂದ 12 ಕಿಲೋಮೀಟರ್ ದೂರದಲ್ಲಿರುವ ಮೋಳಕೇರಿ ಎಂಬ ಗ್ರಾಮದ ಗವಿಯೊಂದರಲ್ಲಿ ವಾಸವಾಗಿದ್ದರು. ಇಂದಿಗೂ ಅಲ್ಲಿ ಅವರ ಹೆಸರಿನ ಗವಿಯೊಂದಿದೆ.

ಆನೆ ಕುದುರೆ ಭಂಡಾರ ವಿರ್ದಡೇನು ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು. ಮಲಗುವುದರ್ಧ ಮಂಚ. ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜ, ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುವುದು. ಕೈ ವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ, ಸಾವಿಂಗೆ ಸಂಗವಾರೂ ಇಲ್ಲ ಕಾಣಾ ..ನಿಃಕಳಂಕ ಮಲ್ಲಿಕಾರ್ಜುನ

ಅದೆಷ್ಟೇ ಸಿರಿ ಸಂಪತ್ತಿದ್ದರೂ ಮನುಷ್ಯ ಒಂದು ಹೊತ್ತಿಗೆ ಪಡಿಯಕ್ಕಿಯಷ್ಟು ಅನ್ನ ಮತ್ತು ಸ್ವಲ್ಪ ಹಾಲು ಸೇವಿಸಲು ಸಾಧ್ಯ.ಅರ್ಧ ಮಂಚದಲ್ಲಿ ಮಲಗುವಷ್ಟೇ ದೇಹವನ್ನು ಹೊಂದಿರುವ ಮನುಷ್ಯನೇ ಈ ಹುರುಳಿಲ್ಲದ ಸಿರಿ ಸಂಪತ್ತನ್ನು ನಂಬಿ ಕೆಡುವುದು ಬೇಡ ಎಲ್ಲವೂ ಪರರ ಪಾಲು.... ನಮ್ಮದು ಎಂಬುದು ಏನಿದ್ದರೂ ನಾವು ಬದುಕಿದ ರೀತಿ ನೀತಿ ಮತ್ತು ನಡೆನುಡಿಗಳು ಮಾತ್ರ ಎಂದು ಸಾರಿದ ಮೋಳಿಗೆಯ ಮಾರಯ್ಯ ಮತ್ತು ಮಹಾದೇವಿ ದಂಪತಿಗಳ ಬದುಕು ಅನುಪಮವಾದದ್ದು. ನಾವೆಲ್ಲರೂ ಆ ದಂಪತಿಗಳು ತೋರಿದ ದಾರಿಯಲ್ಲಿ ಬಾಳಿ ಬದುಕನ್ನು ಬೆಳಗಿಸಿಕೊಳ್ಳುವ.


**। ವೀಣಾ ಹೇಮಂತ್ ಗೌಡ ಪಾಟೀಲ್,**
**ಮುಂಡರಗಿ ಗದಗ**

# ಹಣತೆಯ ಹಬ್ಬ ದೀಪಾವಳಿ

ದೀಪದಿಂದ ದೀಪ. ಪ್ರೀತಿಯಿಂದ ಪ್ರೀತಿ ಹಂಚಿ. ಕುಟುಂಬದ ಸದಸ್ಯರು ಒಟ್ಟಿಗೆ ಸೇರಿ ದೀಪ ಬೆಳಗಿ ಕತ್ತಲನ್ನು ಕಳೆಯುತ ಬೆಳಕನ್ನು ಚೆಲ್ಲುತ ಹೊಸ ವರ್ಷದ ಹೊಸತನ ಹಂಚುತ ಆಚರಿಸುವ ಹಬ್ಬವೇ ದೀಪಾವಳಿ.

ದೀಪಾವಳಿಯನ್ನು ದಿವಾಳಿ, ಹಟ್ಟಿ ಲಕ್ಕವ್ವ ಹಬ್ಬ, ಲಕ್ಷ್ಮೀ ಪೂಜೆ, ಹೀಗೆ ಹಲವಾರು ಹೆಸರುಗಳಿಂದ ಆಚರಣೆ ಮಾಡುತ್ತಾರೆ. ಪ್ರತಿವರ್ಷ ಅಶ್ವಯುಜ ಮಾಸ ಕೃಷ್ಣ ಪಕ್ಷದ ಚತುರ್ದಶಿ, ಅಮಾವಾಸ್ಯೆ ಹಾಗೂ ಕಾರ್ತಿಕ ಮಾಸ ಶುಕ್ಲ ಪಕ್ಷದ ಪಾಡ್ಯ ಈ ದಿನಗಳಲ್ಲಿ ಎಲ್ಲೆಡೆ ವಿಜೃಂಭಣೆಯಿಂದ ದೀಪಾವಳಿ ಆಚರಿಸುತ್ತಾರೆ.

ಮುಂಗಾರು ಪಸಲಿನ ಸಂಭ್ರಮದಲ್ಲಿರುವ ರೈತರು ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಮನೆಗಳ ಮುಂಭಾಗದಲ್ಲಿ ವ್ಯವಸಾಯ ಉಪಕರಣಗಳನ್ನು ಸ್ವಚ್ಛಗೊಳಿಸಿ ಪ್ರದರ್ಶನಕ್ಕಿಟ್ಟು ಕೆಮ್ಮಣ್ಣು ಮತ್ತು ಸುಣ್ಣದ ಕಟ್ಟುಗಳನ್ನ ಹಾಕಿ ಹೂವುಗಳಿಂದ ಅಲಂಕರಿಸಿ ಸಗಣಿಯಿಂದ ತಯಾರಿಸಿದ ಉಂಡೆಗೆ ವಿವಿಧ ದಾನ್ಯಗಳನ್ನು ಸಿಕ್ಕಿಸಿ ಮೂರು ದಿವಸಗಳ ಕಾಲ ಪೂಜೆ ಮಾಡುತ್ತಾರೆ. ಇದಕ್ಕೆ ಹಟ್ಟಿ ಲಕ್ಕವ್ವ ಎಂದು ಕರೆಯುತ್ತಾರೆ. ಇದಲ್ಲದೆ ಮಣ್ಣಿನ ಹಣತೆ ಹಿಡಿದ ಬಾಲಕಿಯರು ಮನೆ ಮನೆಗೆ ತೆರಳಿ " ಅಂಟ್ರಕೆ ಸುಂಟ್ರಕೆ ದೀಪಾ ಬಿಡೆ ದ್ಯಾಮವ್ವ " ಎಂದು ಹಾಡುತ್ತ ಎಣ್ಣೆ ಹಾಗೂ ಬತ್ತಿಯನ್ನು ಸಂಗ್ರಹಿಸುತ್ತಾರೆ. ಪ್ರತಿ ಮನೆಯಯವರು ಮಕ್ಕಳಿಗೆ ಹಣ ನೀಡಿ ಪ್ರೊಸ್ತಾಹಿಸುವ ಸಂಪ್ರದಾಯವಿದೆ.ಇದಲ್ಲದೆ ಮನೆಯಲ್ಲಿ ಪೂಜೆ ಮಾಡಿ ಬೆಳೆದ ಪಸಲಿಗೆ ದೇವರಿಗಿಟ್ಟ ಎಡೆಯನ್ನು ಪಸಲಿಗೆ ಸಿಂಪಡಿಸಿ ಚರಗ ನೀಡುತ್ತಾರೆ. ರೈತರು ತಮ್ಮ ತಮ್ಮ ಜಾನುವಾರಗಳಿಗೆ ಬಣ್ಣ ಹಚ್ಚಿ ಗೆಜ್ಜೆ, ಮೈ ಮೇಲೆ ಅಲಂಕಾರಿಕ ಬಟ್ಟೆ ಹಾಕಿ ಸಂಭ್ರಮಿಸುತ್ತಾರೆ. ಅತ್ಯಂತ ಸಂವೃದ್ಧವಾಗಿ ಬೆಳೆದ ಜಾನುವಾರುಗಳನ್ನು ಗ್ರಾಮಗಳಲ್ಲಿ ಮೆರವಣಿಗೆ ಮಾಡಿ ಸಂಭ್ರಮಿಸುತ್ತಾರೆ. ವ್ಯಾಪಾರಸ್ಥರು ಈ ಹಬ್ಬವನ್ನು ಲಕ್ಷ್ಮೀ ಹಬ್ಬವೆಂದು ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಾರೆ. ಭಾರತೀಯ ಪರಂಪರೆಯಲ್ಲಿ ಪ್ರಮುಖವಾದ ದೀಪಾವಳಿ ಹಬ್ಬವನ್ನು ದೇಶದ ಎಲ್ಲೆಡೆ ಏಕಕಾಲದಲ್ಲಿ ಆಚರಿಸುವುದು ವಿಶೇಷ. ಆದರೆ ಆಚರಣೆಯಲ್ಲಿ ಪೂಜಾ ವಿಧಾನದಲ್ಲಿ, ಸಿಹಿ ತಿನುಸುಗಳಲ್ಲಿ ವೈವಿಧ್ಯತೆ ಕಾಣಬಹುದು. ಮಣ್ಣಿನ



ಹಣತೆ ಉರಿಸುವುದು. ಪಟಾಕಿ ಸಿಡಿಸುವುದು ಸಾರ್ವತ್ರಿಕವಾಗಿದೆ.

ದೀಪಾವಳಿಯ ವಿಶೇಷ ಮುಂಗಾರಿನಲ್ಲಿ ಬೆಳೆದ ದವಸ ದಾನ್ಯ ಕಟಾವು ಮಾಡಿ, ಮಾರಿದ ಹಣ ಸಂಪೂರ್ಣ ಕೈಗೆ ಬಂದಿರುತ್ತವೆ. ಆದ್ದರಿಂದ ದೀಪಾವಳಿ ಹಬ್ಬದಂದು ರೈತರು ಹೊಸ ಆರ್ಥಿಕ ಲೆಕ್ಕ ಪುಸ್ತಕಗಳನ್ನು ತೆರೆಯುತ್ತಾರೆ. ಇದೇ ಹಬ್ಬದ ಸಂದರ್ಭವನ್ನು ಹೊಸ ಆರ್ಥಿಕ ವರ್ಷ ಹಾಗೂ ಹೊಸ ವರ್ಷವೆಂತಲೂ ಕರೆಯುತ್ತಾರೆ.

ನೆನಪಿರಲಿ, ಬೆಳಕಿನ ಹಬ್ಬದ ಸಂಭ್ರಮ ಯಾರಿಗೂ ನೋವು ಉಂಟು ಮಾಡಬಾರದು. ಸಂಭ್ರಮದಲ್ಲಿ ಪರಿಸರ ಹಾಗೂ ಭೂ, ಮಾಲಿನ್ಯ ಮಾಡಿದರೆ, ಭೂ ತಾಯಿ ಕ್ಷೇಮಿಸಿದರೂ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಕ್ಷೇಮಿಸುವುದಿಲ್ಲ... ಭೂಮಿಯಲ್ಲಿ ಕರಗದೆ ಇರುವಂತಹ ಮಾಲಿನ್ಯಕಾರಕ ಹಾಗೂ ರಾಸಾಯನಿಕ ವಸ್ತುಗಳನ್ನು ಬಳಸಬೇಡಿ. ನಿಮ್ಮ ಸಂಭ್ರಮ ನೆರೆ ಹೊರೆಯರಿಗೆ ಮಾರಕವಾಗಬಾರದು. ಸಂಭ್ರಮದಲ್ಲಿ ನೀವು ಸಿಡಿಸುವ ಮದ್ದು ಗುಂಡುಗಳಿಂದ ಇತರರಿಗೆ ತೊಂದರೆ ಕೊಡದೆ, ಪರಿಸರಕ್ಕೆ ಪೂರಕವಾದ ವಸ್ತುಗಳನ್ನು ಬಳಸಿ. ಮನೆ ಅಲಂಕರಿಸುವಾಗ ಪ್ಲಾಸ್ಟಿಕ್ ಬಳಕೆ ಮಾಡುವುದಕ್ಕಿಂತ ನಮ್ಮ ಸುತ್ತ ಮುತ್ತಲಿನಲ್ಲಿ ನೈಸರ್ಗಿಕವಾಗಿ ಸಿಗುವ ಹೂವು, ಬಾಳೆ ಎಲೆ ಹಾಗೂ ಮಾವಿನ ಎಲೆಗಳನ್ನು ಬಳಸಿ,ಪಾರಂಪರಿಕ ರೀತಿ ಮನೆ ಅಲಂಕರಿಸಬೇಕು.

ವಿಷಕಾರಿ ಪೆಟ್ರೋಲಿಯಂ ಬಳಸಿ ಮಾಡುವ ಕ್ಯಾಂಡಲ್ ಬಳಸಿದರೆ ವಿಷಕಾರಿ ವಸ್ತುಗಳನ್ನು ಪರಿಸರಕ್ಕೆ ಬಿಡುಗಡೆ ಮಾಡುತ್ತವೆ. ಮನೆಗೆ ಬಳಸುವ ಪ್ರತಿಯೊಂದು ವಸ್ತು ಪರಿಸರಕ್ಕೆ ಪೂರಕವಾಗಿರಬೇಕು. ಏಕೆಂದರೆ ಮಿರ ಮಿರ ಮಿಂಚುವ ದೀಪ ಕಣ್ಣಿಗೆ ಮುದ ನೀಡಬಹುದು. ಅದರೆ ಜೀವ ಸಂಕುಲದ ಮೇಲೆ ವ್ಯಕ್ತಿರಿಕ್ತ ಪರಿಣಾಮ ಉಂಟು ಮಾಡುತ್ತದೆ.

ಮನೆಯಲ್ಲಿ ಪರಿಸರಸ್ನೇಹಿ ಸಗಣಿಯಿಂದ ಮಾಡಿದ, ಮಣ್ಣಿನಿಂದ ತಯಾರಿಸಿದ ಹಣತೆಯನ್ನು ಬಳಸಿ ಹಾಗೇ ಮನೆಯ ಮೇಲೆ ಕಟ್ಟುವ ಆಕಾಶ ಪಟ್ಟಿಗೂ ಪೇಪರ್ ಬಳಸಬೇಕು. ಆಗ ಬೆಳಕಿನ ಹಬ್ಬಕ್ಕೆ ಮತ್ತಷ್ಟು ಮೆರಗು ಹೆಚ್ಚಿಸುತ್ತದೆ. ಆದಷ್ಟು ನೈಸರ್ಗಿಕವಾದ ವಸ್ತುಗಳನ್ನು ಬಳಸಿದರೆ ಬೆಳಕಿನ ಹಬ್ಬಕ್ಕೆ ಮತ್ತಷ್ಟು ಮೆರಗು ನೀಡುವುದು.

ಹಬ್ಬಗಳಲ್ಲಿ ಹೊಸ ಬಟ್ಟೆಗಳ ಖರೀದಿ ಭರಾಟೆ ಜೋರಾಗಿರುತ್ತವೆ. ತಮ್ಮ ಬಳಿ ಇದ್ದ ಹಳೆಯ ಬಟ್ಟೆಗಳನ್ನು ಅನಗತ್ಯ ಬಿಸಾಡಿದರೆ ಪರಿಸರ ಮಾಲಿನ್ಯಕ್ಕೆ ದಾರೆ ಎಳೆದಂತಾಗುವು. ಹಳೆಯ ಬಟ್ಟೆ ಅನಾಥಾಶ್ರಮಕ್ಕೆ ದಾನ ಮಾಡಿದರೆ ಮಕ್ಕಳು ಹಬ್ಬ ಮಾಡಿದಂತಾಗುವುದು ಹಾಗೇ ಪರಿಸರದಲ್ಲಿ ಮಾಲಿನ್ಯ ಕೂಡ ತಡೆಗಟ್ಟುವಂತಾಗುತ್ತದೆ.

ಮನ ಮನೆಗಳಿಗೆ ಬೆಳಕು ನೀಡುವ ದೀಪಾವಳಿ ಮತ್ತೊಬ್ಬರ ಬಾಳಲ್ಲಿ ಕಟ್ಟಲು ತರುವಂತಾಗಭಾರದು. ನಮ್ಮ ಪರಂಪರೆ ಮುಂದುವರಿಸುವ ರೀತಿಯಲ್ಲಿ ನಮ್ಮ ಹಿರಿಯರು ಆಚರಿಸಿಕೊಂಡು ಬಂದ ಮಾದರಿಯಲ್ಲಿ ಪರಿಸರ ಸ್ನೇಹಿ ದೀಪಾವಳಿಯನ್ನು ಮತ್ತೆ ಆರಂಭಿಸೋಣ

**। ಲಕ್ಷ್ಮಣ ನಾಯ್ಕ. ಡಿ**
**ಅಪ್ರೆಂಟಿಸ್ ಟ್ರೈನಿ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾವೇರಿ.**

## ಕವಿ ಮನಸು

### ಕರೆದಮೇಲೆ ಚಿಂತೆ ಏಕೆ



ಬಿಲ್ಲಹುಬ್ಬು ಕಣ್ಣಿನಲ್ಲಿ
ಸುಮದ ಶರವನೆಸೆದಿದೆ
ಇನಿಯನೊಡನೆ ಬೆರೆವ ಮನದೆ
ಲಜ್ಜೆ ಮೊಗದಿ ಇಣುಕಿದೆ

ತಾರೆಯಂತೆ ಹೊಳೆವ ಕಣ್ಣು
ನೂರು ಕಥೆಯ ಹೇಳಿದೆ
ಕೆಂಪು ಅಧರ ನಗುವ ಸೂಸಿ
ಗೆಳೆಯನನ್ನು ಕರೆದಿದೆ

ಸನ್ನೆ ಮಾಡಿ ಕರೆದ ಮೇಲೆ
ಮನದಲೇನು ಚಿಂತೆಯೆ
ನಲ್ಲ ಬಳಿಗೆ ಬರುವ ವೇಳೆ
ಮರೆಯಲೇಕೆ ನಿಂತೆಯೆ

ಚೆಲುವೆ ನೀನು ಕರೆದ ಮೇಲೆ
ಬರದೆ ದೂರ ಉಳಿವನೆ
ನಿನ್ನ ಸೊಗಸ ಕಂಡ ಬಳಿಕ
ನಲ್ಲ ನಿನ್ನ ಬಿಡುವನೆ?॥

। **ಪೆರ್ಮುಖ ಸುಬ್ರಹ್ಮಣ್ಯ ಭಟ್**
(ಚಿತ್ರ ಕೃಪೆ ಅಂತರ್ಜಾಲ)







## ತುಂಗಭದ್ರಾ ನೀರಿನ ಮಟ್ಟ



| ಸೋಮವಾರ : 13-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1602.74 ಅಡಿ |
| ಒಳ ಹರಿವು | 7151 ಕ್ಯುಸೆಕ್ |
| ಹೊರ ಹರಿವು | 7993 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 25.273 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.56 ಅಡಿ |
| ಒಳ ಹರಿವು | 4672 ಕ್ಯುಸೆಕ್ |
| ಹೊರ ಹರಿವು | 9074 ಕ್ಯುಸೆಕ್ |
| ಸಾಮರ್ಥ್ಯ | 100.054 ಟಿಎಂಸಿ |

# ಮಕ್ಕಳ ನೆಚ್ಚಿನ ಚಾಚಾ ನೆಹರೂ


## ಸ್ವಾತಂತ್ರ್ಯಕ್ಕಾಗಿ ಮಿಡಿದ ಜವಾಹರಲಾಲ ನೆಹರೂ

ಜವಾಹರಲಾಲ್ ನೆಹರೂ ಅವರು 1889 ರಲ್ಲಿ ಜನಿಸಿದರು. ಜವಾಹರಲಾಲ್ ನೆಹರೂ ಅವರ ತಂದೆ ಮೋತಿಲಾಲರು ಮೂಲತಹ ಕಾಶ್ಮೀರದಿಂದ ಬಂದವರು. ಅನಿರೀಕ್ಷಿತ ಘಟನೆಗಳ ನಂತರ ಆಗ್ರಾದಲ್ಲಿ ನೆಲಸಿದರು. ಮೋತಿಲಾಲರು ಆಗ್ರಾದಲ್ಲಿಯೇ ಶಾಲಾ ಮತ್ತು ಕಾಲೇಜಿನ ಶಿಕ್ಷಣ ಪಡೆದರು. ಮುಂದೆ ಕಾನೂನು ಶಾಸ್ತ್ರವನ್ನು ಓದಿ ವಕೀಲಿ ಪರೀಕ್ಷೆಯಲ್ಲಿ ಚಿನ್ನದ ಪದಕವನ್ನು ಗಳಿಸಿದರು. ಕೆಲದಿನಗಳಲ್ಲೇ ಅವರು ವಕೀಲ ವೃತ್ತಿಯಲ್ಲಿ ಹೆಸರು ಮಾಡಿದರು. ಪಾಶ್ಚಾಂತ್ಯರಂತೆ ಜೀವಿಸುವುದು ಮೋತಿಲಾಲರಿಗೆ ಇಷ್ಟವಾಗಿತ್ತು. ಸದಾ ಕೋಟು,ಪ್ಯಾಂಟು, ಟೈಗಳನ್ನು ಬಳಸುತ್ತಿದ್ದರು. ಅದೇ ಜೀವನ ಶೈಲಿಯಲ್ಲಿ ಬದುಕುತ್ತಿದ್ದರು. ತದನಂತರದಲ್ಲಿ ಮೋತಿಲಾಲರು ಅಲಹದಾಬಾದ್ ನಲ್ಲಿ ವಕೀಲಿ ವೃತ್ತಿ ಆರಂಭಿಸಿದರು. ಅಲಹಾದಾಬಾದ್ ನಲ್ಲಿ ಸುಂದರ, ಸುಸಜ್ಜಿತ ಮನೆಯನ್ನು ಕಟ್ಟಿಸಿದರು. ಆ ಮನೆಗೆ ಆನಂದ ಭವನ ಎಂದು ಹೆಸರಿಟ್ಟಿದ್ದರು. ಆನಂದ ಭವನದಲ್ಲಿ ಟೆನ್ನಿಸ್ ಕೋರ್ಟ, ಈಜುಕೋಳ, ವಿಶಾಲವಾದ ಉದ್ಯಾನವನವಿತ್ತು. ಅರಮನೆಯಂತಿದ್ದ ಈ ಆನಂದ ಭವನದಲ್ಲಿ ಜವಾಹರಲಾಲರು ತಮ್ಮ ಬಾಲ್ಯವನ್ನು ಕಳೆದರು.

ಆವಾಹರಲಾಲರ ಬಾಲ್ಯದ ಶಿಕ್ಷಣ ಅವರ ಮನೆ ಆನಂದ ಭವನದಲ್ಲೆ ನಡೆಯಿತು. ಶಿಕ್ಷಕರು ಮನೆಗೆ ಬಂದು ಪಾಠ ಹೇಳಿಕೊಡುತ್ತಿದ್ದರು. ಇದರಿಂದ ಅವರಿಗೆ ತಮ್ಮ ವಯಸ್ಸಿನ ಹುಡುಗರೊಂದಿಗೆ ಸ್ನೇಹ ಬೆಳಸಿಕೊಳ್ಳುವ ಅವಕಾಶ ಸಿಗಲಿಲ್ಲ. ಬಾಲ್ಯದಲ್ಲಿ ಅವರಿಗಿದ್ದ ಒಬ್ಬರೇ ಒಬ್ಬ ಗೆಳೆಯರೆಂದರೆ ಅವರ ತಂದೆ ಬಳಿ ಗುಮಾಸ್ತರಾಗಿದ್ದ ಮುನ್ಷಿಮುಬಾರಕ್ ಅಲಿ ಅವರು. ಜವಾಹರಲಾಲರು ತಮಗೆ ಬೇಸರವಾದಾಗ ಎನಾದರೂ ತೊಂದರೆಯಾದಾಗ ಮುನ್ಷಿ ಮುಬಾರಕ ಅಲಿ ಅವರ ಬಳಿ ಹೋಗುತ್ತಿದ್ದರು. ಅವರು ಜವಾಹರಲಾಲರಿಗೆ ಕಥೆಗಳನ್ನು ಹೇಳುತ್ತಿದ್ದರು. ಜವಾಹರಲಾಲರು ಗಂಟೆಗಟ್ಟಲೆ ಕುಳಿತು ಕಥೆಗಳನ್ನು ಕೇಳುತ್ತಿದ್ದರು. ಅರೇಬಿಯನ್ ನೈಟ್ಸ್, ಪೌರಾಣಿಕ,ಐತಿಹಾಸಿಕ, ವೀರರ ಕಥೆಗಳನ್ನು ಕೇಳುತ್ತಿದ್ದರು. ಹಬ್ಬ ಹರಿದಿನಗಳೆಂದರೆ ಜವಾಹರಲಾಲರಿಗೆ ತುಂಬ ಇಷ್ಟ. ಜವಾಹರಲಾಲರು ಚಿಕ್ಕಂದಿನಲ್ಲಿ ಒಮ್ಮೆ ತಮ್ಮ ತಂದೆ ಮೋತಿಲಾಲರ ಮೇಜಿನ ಮೇಲಿದ್ದ ಎರಡು ಪೆನ್‌ಗಳಲ್ಲಿ ಒಂದನ್ನು ತೆಗೆದುಕೊಂಡರು. ತಂದೆ ಮೋತಿಲಾಲರು ಕಾಣೆಯಾದ ಪೆನಗಳನ್ನು ಹುಡಿಕಿಸಿದರು. ಸೇವಕರಿಗೆ ಹುಡುಕಲು ಆದೇಶಿಸಿದರು. ಕೊನೆಗೂ ಪೆನ್ ತೆಗೆದುಕೊಂಡದ್ದು ಮಗನೆಂದು ಕೋಪಗೊಂಡು ಜವಾಹರಲಾಲರಿಗೆ ಹೊಡೆದಿದ್ದರು. ನಂತರದಲ್ಲಿ ತಾಯಿ ಸ್ವರೂಪರಾಣಿ ಸಮಾಧಾನ ಮಾಡಿ ತಿಳಿಸಿಹೇಳಿದ್ದರು. ಅಂದಿನಿಂದ ಜವಾಹರಲಾಲ ನೆಹರೂ ಅವರು ತಮ್ಮ ತಂದೆಗೆ ನೋವಾಗದಂತೆ ನೆಡೆದುಕೊಂಡರು.

ಜವಾಹರಲಾಲರು ಚಿಕ್ಕಂದಿನಿಂದಲೇ ವೃತ್ತ ಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳಸಿಕೊಂಡಿದ್ದರು. ಪತ್ರಿಕೆಗಳನ್ನು ಓದಿ ಸುದ್ದಿ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿದ್ದರು. ಮೋತಿಲಾಲರು ಮಗನನ್ನು ಓದಲು ಅವರ ಹದಿನೈದನೇ ವಯಸ್ಸಿಗೆ ಇಂಗ್ಲೆಂಡಿನ ಸುಪ್ರಸಿದ್ಧ ಹ್ಯಾರೋ ಸ್ಕೂಲ್ ಗೆ ಸೇರಿಸಿದರು. ಆದರೆ ಜವಾಹರಲಾಲರಿಗೆ ಆ ಶಾಲೆ ಒಗ್ಗಲಿಲ್ಲ. ಎಕಾಂಗಿ ಎಂಬ ಭಾವನೆಬಂದಿತ್ತು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಕೇಂಬ್ರಿಜ್ ಯುನಿವರ್ಸಿಟಿಯ ಟ್ರಿನಿಟಿ ಕಾಲೇಜಿಗೆ ಸೇರಿದರು. ಮುಂದೆ ಮೂರು ವರ್ಷಗಳ ಕಾಲ ಅಲ್ಲಿ ಅಧ್ಯಯನ ಮಾಡಿದರು. ರಸಾಯನಶಾಸ್ತ್ರ, ಭೂಗರ್ಭಶಾಸ್ತ್ರ ಮತ್ತು ಸಸ್ಯಶಾಸ್ತ್ರಕ್ಕಾಗಿ ಅವರು ರಿಜಿಸ್ಟರ್ ಮಾಡಿಸಿದ್ದರು. ಆದರೂ ಇತಿಹಾಸ, ರಾಜಕೀಯಶಾಸ್ತ್ರ, ಅರ್ಥಶಾಸ್ತ್ರ, ಸಾಹಿತ್ಯ ಮತ್ತು ತತ್ವಜ್ಞಾನಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಹೆಚ್ಚಾಗಿ ಓದುತ್ತಿದ್ದರು. ಕೇಂಬ್ರಿಜ್ ನಲ್ಲಿದ್ದಾಗ ಜವಾಹರಲಾಲರು ಲಂಡನ್ ನ ಇನ್ಸ್ ಆಫ್ ಕೋರ್ಟನಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡರು. ತದನಂತರದಲ್ಲಿ ಅವರು ಬ್ಯಾರಿಸ್ಟರ್ ಅಟ್ ಲಾ ಆದರು. ಇಂಗ್ಲೆಂಡಿನಲ್ಲಿ ಎಳು ವರ್ಷಗಳ ಕಾಲ ಇದ್ದ ನೆಹರೂ ಅವರು 1912ರಲ್ಲಿ ಭಾರತಕ್ಕೆ ಮರಳಿದರು. ಮರಳಿದ ನೆಹರೂ ಅವರು ಅಲಹಾಬಾದ್ ಕೋರ್ಟನಲ್ಲಿ ವಕೀಲರಾದರು. ವಕೀಲಿ ವೃತ್ತಿ ಇಷ್ಟವಿರಲಿಲ್ಲ. ಒಂದೊಮ್ಮೆ ಶಿಕಾರಿಗೆ ತೆರಳಿದ ನೆಹರೂ ಅವರು ಜಿಂಕೆಗೆ ಗುಂಡಿಟ್ಟರು ಅಂದು ಜಿಂಕೆಯ ಕಣ್ಣಲ್ಲಿ ತುಂಬಿದ್ದ ಮೂಕವೇದನೆ ಕಂಡಾಗ ಮನಸ್ಸು ಕರಗಿತು ಅದೇ ಶಿಕಾರಿ ಕೊನೆಯಾಯಿತು. ನೆಹರೂ ಅವರು ತಮ್ಮ ತಂದೆಯವರೊಂದಿಗೆ ಆಗಾಗ ಚರ್ಚೆಗಳು ನಡೆಯುತ್ತಿದ್ದವು. ಬ್ರಿಟಿಷರ ವಿಷಯದಲ್ಲಿ ಭಾರತೀಯರು ಮೆತ್ತಗಿರಬಾರದು, ಅದನ್ನು ಧಿಕ್ಕರಿಸುವ ಧೈರ್ಯ ಇರಬೇಕು ಎಂಬುದು ನೆಹರೂ ಅವರ ಅಭಿಪ್ರಾಯವಾಗಿತ್ತು. ಮೋತಿಲಾಲರು ಬ್ರಿಟಿಷರಿಗೆ ಅವರು ಮಾಡುತ್ತಿರುವ ಅನ್ಯಾಯವನ್ನು ತೋರಿಸಿಕೊಡಬೇಕು. ಕಾನೂನು ಪ್ರಕಾರ ಅಕ್ರಮ ಸರಿಪಡಿಸಿಕೊಳ್ಳಲೆತ್ನಿಸಬೇಕು ಎಂಬುದು ಮೋತಿಲಾಲರ ಅಭಿಪ್ರಾಯವಾಗಿತ್ತು.

ನೆಹರೂ ಅವರು ಅವರ ಇಪ್ಪತೇಳನೆ ವಯಸ್ಸಿನಲ್ಲಿ ಕಮಲಾಕೌಲ್ ಅವರನ್ನು ಮದುವೆಯಾದರು. 1914 ರಲ್ಲಿ ಮಹಾತ್ಮ ಗಾಂಧೀಜಿಯವರು ರಾಜಕೀಯ ರಂಗ ಪ್ರವೇಶಿಸಿದರು. ಗಾಂಧೀಜಿ ಅವರನ್ನು ಕುರಿತು ನೆಹರೂ




ಅವರು ಕತ್ತಲೆಯನ್ನು ಸೀಳಿಕೊಂಡು ಮುನ್ನುಗ್ಗುವ ಬೆಳಕಿನ ಆಶಾಕಿರಣ ಗಾಂಧೀಜಿ ಎಂದು ವರ್ಣಿಸಿದ್ದರು. ಜಲಿಯನ್‌ವಾಲಬಾಗ್‌ನಲ್ಲಿ ಹತ್ಯಾಕಾಂಡ ನೆಹರೂ ಅವರ ಕುಟುಂಬದ ಮೇಲೆ ಗಾಢವಾದ ಪರಿಣಾಮ ಬೀರಿತು. 1920 ರಲ್ಲಿ ನಡೆದ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರೊಂದಿಗೆ ರಾಜಕೀಯ ರಂಗಕ್ಕೆ ಬಂದರು. ಆವಾಹರಲಾಲರು ಹಳ್ಳಿಯಿಂದ ಹಳ್ಳಿಗೆ ತಿರುಗಾಡಿದರು, ಎತ್ತಿನಗಾಡಿ, ಕಾಲ್ನಡಿಗೆ, ಬೈಸಿಕಲ್ ನಲ್ಲಿ ಹೋಗಿ ಅಲ್ಲಿಯ ಜನರೊಂದಿಗೆ ಬೆರೆತು. ರೈತರ ಸಭೆಗಳಲ್ಲಿ ಭಾಷಣ ಮಾಡಿ ಅವರೊಂದಿಗೆ ಸರಳವಾಗಿ ಇರುತ್ತಿದ್ದರು. ಮೋತಿಲಾಲರು ಮಹಾತ್ಮ ಗಾಂಧೀಜಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ತಮ್ಮ ಅರವತ್ತನೇ ವಯಸ್ಸಿನಲ್ಲಿ ತಮ್ಮ ಜೀವನದ ರೀತಿಗಳನ್ನು ಬದಲಿಸಿದರು. ಐರೋಪ್ಯರಂತೆ ಬದುಕುವುದನ್ನು ಬಿಟ್ಟು ಸಾಧಾರಣ ಭಾರತೀಯರಂತೆ ಜೀವಿಸುವುದನ್ನು ಕಲಿತರು. ನೆಹರೂ ಕುಟುಂಬದಲ್ಲಿ ಆದ ಬದಲಾವಣೆ ಜನರ ಮನಸ್ಥಿತಿಯಲ್ಲಿ ಉಂಟಾಗಿದ್ದ ಬದಲಾವಣೆಯನ್ನು ಪ್ರತಿಬಿಂಬಿಸುತ್ತಿತ್ತು ಜನರು ಸೂಟ್ ಟೈಗಳನ್ನು ಬಿಟ್ಟು ಭಾರತೀಯರಂತೆ ಬದುಕಲು ಪ್ರಾರಂಭಿಸಿದರು. ಆದ ಬದಲಾವಣೆಯನ್ನು . ಈ ಕುರಿತು ನಮ್ಮ ಜನಪದರು ತಮ್ಮದೇ ಶೈಲಿಯಲ್ಲಿ ಹೀಗೆ ಹಾಡಿದ್ದಾರೆ.

ಖಂಡಿತ ಮಾತ ಕೇಳ್ರಿ ಪಂಡಿತರೆನಿಸಿಕೊಂಡ್ರು
ಜವಾಹರ ಲಾಲ ನೆಹರು ಅಂಬುವರಾ
ಹಿಂದುಸ್ಥಾನದ ಸಲುವಾಗಿ ಬಂದಿಖಾನಿ ಬಿದ್ದಾರ
ತಂದಿ ಸಹಿತ ಬಂಧು ಬಗಿನಿಯರಾ

ಬಂಗಾರ ತಾಟಿನೊಳಗ ಊಟ ಮಾಡುತ್ತಿದ್ರಾ
ಮೋಟಾರದೊಳಗ ಇವರ ಸಂಚಾರ
ಹೊತ್ತ ಉದಿಯಾದರ ಹತ್ತು ಸಾವಿರ ರೂಪಾಯಿ ಪಗಾರ
ಇವರ ತಂದಿಯವರು ಇದ್ದರು ಮೊದಲ ಬ್ಯಾರಿಸ್ಟರಾ
ಫ್ರಾನ್ಸ್ ದೇಶದಿಂದ ಅರಿಬಿ ಇಸ್ತ್ರೀಯಾಗಿ ಬರತಿದ್ದು

ಇಂತ ದೊಡ್ಡ ಮನೆತನಾ ಬಿಟ್ಟ    ನೌಕರಿ ಒಕ್ಕೂಟ್ಟ
ಕಾಂಗ್ರೆಸ್ಸ ಕೂಡ್ಯಾರ ಸ್ವಾರ್ಥತ್ಯಾಗಮಾಡಿ ದುಡಿಯುವವರಾ
ತಾಯಿಸತ್ರ  ಮೋಹಇಲ್ಲ ದೇಶಸೇವೆಯೊಳಗ ತಲ್ಲೀನರಾಗಿ
ಜ್ಯಾನವರಿ ತಾರೀಖ ನಾಕು ಮೂವತ್ತೊಂದನೇಯ ಇಸವಿಯೊಳು
ಜೈಲಕ ಹೊಂಟ್ರ ನೆಹರೂ ಸಾವಕಾರ
ಊರಮಂದಿ ಎಲ್ಲಕೂಡಿ ದಾರಿ ತರೀಬಿ ಕೇಳತಾರ
ಯಾರ ಹೇಳ್ರಿ ಇನ್ನ ನಮಗ ಆಸರ .. ಗೀ    ಗೀ



ಹೀಗೆ ಇದು ಜನಪದರಿಂದ ದೇಶಾದ್ಯಾಂತ ಹರಡಿ. ಹೋರಾಟಕ್ಕೆ ಜಾತಿ, ಮತ ಮರೆತು ರೈತರು, ಜಮೀನದಾರರು, ಹಿಂದೂ, ಮುಸ್ಲಿಂ ಕೂಡಿ ಒಂದಾದರು. ಒಂದೇ ಗುರಿಯಿಂದ ಒಂದಾದ ಇವರಿಗೆ ಸ್ವಾತಂತ್ರ್ಯ ದೊಕಿಸಿಕೊಳ್ಳುವುದೊಂದೆ ಎಕಮಾತ್ರ ಗುರಿಯಾಗಿತ್ತು. ಸ್ವಾಂತತ್ರ್ಯ ಚಳುವಳಿಯಲ್ಲಿ ನೆಹರೂ ಅವರು ತಮ್ಮ ತಂದೆಯರೊಂದಿಗೆ ಧುಮುಕಿದರು. 1921 ರಲ್ಲಿ ಇವರಿಬ್ಬರನ್ನು ಬಂಧಿಸಲಾಯಿತು. ಮೂರು ತಿಂಗಳ ಬಳಿಕ ಸೆರೆಮನೆಯಿಂದ ಹೊರ ಬಂದರು. ಆವಾಹರಲಾಲ ನೆಹರೂ ಅವರು ರಾಜಕೀಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಆರು ವಾರಗಳಲ್ಲಿ ಅವರಿಗೆ ಪುನಹ ಸೆರೆಮನೆ ಸೇರ ಬೇಕಾಯಿತು. ಸೆರೆಮನೆಯಲ್ಲೂ ಸುಮ್ಮನೆ ಜವಾಹರಲಾಲರು ಸುಮ್ಮನೇ ಕುಳಿತುಕೊಳ್ಳಲಿಲ್ಲ. ನೂಲು ತೆಗೆಯುವುದನ್ನು ಕಲಿತರು. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿದರು. ಉತ್ತಮ ಆರೋಗ್ಯಕ್ಕಾಗಿ ಬೆಳಿಗಿನ ಜಾವ ಜೈಲಿನ ಸುತ್ತ ಓಡಿ ವ್ಯಾಯಮ ಮಾಡುತ್ತಿದ್ದರು. ಲೇಖನಿ, ಕಾಗದ ಇಟ್ಟುಕೊಳ್ಳಲು ಅವಕಾಶ ಸಿಕ್ಕಾಗ ಬರವಣಿಗೆಯಲ್ಲಿ ತಲ್ಲೀನರಾದ ಅವರು ಎರಡು ಪುಸ್ತಕಗಳನ್ನು ಬ ರೆದರು. "ದಿ ಡಿಸ್ಕವರಿ ಆಫ್ ಇಂಡಿಯಾ" ಮತ್ತು ಆತ್ಮಕಥೆಯನ್ನು ಬರೆದರು. ಸೆರೆಮನೆಯಿಂದಲೇ ಮಗಳು ಇಂದಿರಾಗೆ ಪತ್ರಗಳನ್ನು ಬರೆಯುತ್ತಿದ್ದರು. ಈ ಪತ್ರಗಳ ಮೂಲಕ ಅವರು ಮಗಳಿಗೆ ಇತಿಹಾಸ ಕಲಿಸಿಕೊಟ್ಟರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧೀರರಾಗಿ ಹೋರಾಡಬೇಕೆಂದು ತಿಳಿಸುತ್ತಿದ್ದರು. ಒಂದೊಂದು ಪತ್ರದಲ್ಲೂ ಅವರಿಗೆ ಇದ್ದ ಕಾಳಜಿ ಕಾಣುತ್ತಿತ್ತು. ಇಂದಿರಾಗೆ ಬರೆದ ಪತ್ರಗಳೇ "ಗ್ಲಿಂಪಿಸಸ್ ಆಫ್ ವರ್ಲ್ಡ್ ಹಿಸ್ಟರಿ " ಎಂಬ ಪುಸ್ತಕ ರೂಪದಲ್ಲಿ ಹೊರತರಲಾಯಿತು,

ಒಂಬತ್ತು ಸಲ ಹತ್ತು ವರ್ಷಗಳಕಾಲ ಸೆರಮನೆವಾಸ ಅನುಭವಿಸಿದರು. 1930 ರಲ್ಲಿ ಉಪ್ಪಿನ ಸತ್ಯಾಗ್ರಹಕ್ಕೆ ಗಾಂಧೀಜಿ ಕರೆಕೊಟ್ಟರು. ಅದರಲ್ಲಿ ಅವರ ಪತ್ನಿ ಕಮಲಾ ತಂಗಿ ಕೃಷ್ಣಾ ಸ್ವಯಂ ಸೇವಕರಾಗಿ ದುಡಿದರು. 1931 ರಲ್ಲಿ ಮೋತಿಲಾಲರು ತೀವ್ರವಾಗಿ ಅಸ್ವಸ್ಥರಾದರು ಆ ಸಮಯದಲ್ಲಿ ಜವಾಹರಲಾಲರು ಸೆರೆಮನೆಯಲ್ಲಿದ್ದರು. ತಂದೆ ಬಳಿ ಇರಲು ಬಿಡುಗಡೆಗೊಳಿಸಿದರು. ಜವಾಹರಲಾಲರು ಬಿಡುಗಡೆಯಾದ ಸ್ವಲ್ಪ ದಿನಗಳಲ್ಲೇ ಮೋತಿಲಾಲರು ಕೊನೆಯುಸಿರೆಳೆದರು. ಪತಿ ಅಗಲಿಕೆಯ ಬಳಿಕ ಸ್ವರೂಪರಾಣಿ ಎಕಾಂಗಿಯಾದರು. ಮಗ ಜೈಲಿನಲ್ಲಿದ್ದರೂ ಧೃತಿಗೆಡಲಿಲ್ಲ. ಮೆರವಣಿಗೆಯ ಒಂದರ ಮುಂದಾಳತ್ವ ಹೊಂದಿದ್ದ ತಾಯಿ ಸ್ವರೂಪರಾಣಿಯವರಿಗೆ ಬ್ರಿಟಿಷರು ಹೊಡೆದರು. ಸ್ವರೂಪರಾಣಿಗೆ ಪದೇ ಪದೇ ಆರೋಗ್ಯ ಕೆಡುತ್ತಿತ್ತು. ಜವಾಹರಲಾಲರು ಬಂದ ಸ್ವಲ್ಪ ದಿನಗಳಲ್ಲೇ ತಾಯಿ ಸ್ವರೂಪರಾಣಿಯವನ್ನು ಬಂಧಿಸಲಾಯಿತು. 1936 ರಲ್ಲಿ ಪತ್ನಿ ಕಮಲಾ ಕೊನೆಯುಸಿರೆಳೆದರು. ಕಮಲಾ ಇಲ್ಲದ ದಿನಗಳು ನೆಹರೂ ಅವರಿಗೆ ಕಷ್ಟವೆನಿಸಿದವು. 1938 ರಲ್ಲಿ ತಾಯಿ ಸ್ವರೂಪರಾಣಿ ನಿಧನರಾದರು ನಾನು ನನ್ನ ಮನೆಗೆ ಹಿಂದುರಿಗಿದೆ ಬಿಕೋ ಎನ್ನುವ  ಆ ಮನೆಯಲ್ಲಿ ನಾನೊಬ್ಬನೇ ಮೂಕನಾಗಿ ಕುಳಿತೆ. 1942 ರಲ್ಲಿ ಗಾಂಧೀಜಿ ಭಾರತ ಬಿಟ್ಟು ತೊಲಗಿ ಚಳುವಳಿಗಾಗಿ ಕರೆಕೊಟ್ಟರು.

ಭಾರತ 1947 ರ ಆಗಸ್ಟ 14 ಮತ್ತು 15 ರ ಮಧ್ಯರಾತ್ರಿ ಜವಾಹರಲಾಲರು ನೆಹರೂ ಅವರು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದರು. ಸ್ವಾತಂತ್ರ್ಯಕ್ಕಾಗಿ ಮುಂಚೆ ನೆಡದಿದ್ದ ಅಹಿತಕರ ಘಟನೆಗಳಿಂದ ಅವರಲ್ಲಿ ಹೆಚ್ಚಿನ ಸಂತೋಷವೇನು ಕಾಣಲಿಲ್ಲ. ಆದರೆ ಅವರ ಮಾತುಗಳನ್ನು ಕೇಳಲು ಭಾರತದ ಪ್ರತಿಯೊಬ್ಬರು ಕಾದಿದ್ದರು. ಬಹು ವರ್ಷಗಳ ಹಿಂದೆಯೇ ನಾವು ಭವಿಷ್ಯವನ್ನು  ಗೊತ್ತು ಮಾಡಿಕೊಂಡಿದ್ದೇವು. ನಾವು ನಮ್ಮ ವಾಗ್ದಾನವನ್ನು ಈಡೇರಿಸಬೇಕಾದ ಸಮಯ ಇದೀಗ ಬಂದಿದೆ. ನಾವು ನಮ್ಮ ಭರವಸೆಗಳನ್ನು ಸಂಪೂರ್ಣವಾಗಿ ಈಡೇರಿಸಬೇಕು. ಇಂದು ನಡುರಾತ್ರಿ, ಇಡೀ ಜಗತ್ತು ನಿದ್ರಿಸುವಾಗ ಭಾರತ ಎಚ್ಚರಗೊಳ್ಳುತ್ತಿದೆ. ಹೊಸ ಜೀವ ತೆಳೆಯುತ್ತಿದೆ. ಸ್ವಾತಂತ್ರ್ಯದ ಸವಿಗನಸು ನನಸಾಗುತ್ತಿದೆ. ಎಂದು ಭಾಷಣದಲ್ಲಿ ಹೇಳಿದ್ದರು.

ನೂರೈವತ್ತು ವರ್ಷಗಳಿಗೂ ಹೆಚ್ಚುಕಾಲ ವಿದೇಶಿ ಆಳ್ವಿಕೆ ಮುಕ್ತಾಯಗೊಂಡು. ಜವಾಹರಲಾಲ ನೆಹರೂ ಸ್ವಾತಂತ್ರ್ಯ ಭಾರತದ ಮೊದಲ ಪ್ರಧಾನಿಯಾದರು. ಜವಾಹರಲಾಲ ನೆಹರೂ ಅವರು ಬಿಡುವಿಲ್ಲದೆ ದುಡಿದರು.ಅವರು ಪ್ರತಿದಿನ ಹದಿನೈದು ಘಂಟೆಗಳಕಾಲ ದುಡಿದು. ದೇಶದಲ್ಲಿ ಕೈಗಾರಿಕೆ, ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ, ಎಲ್ಲ ಕ್ಷೇತ್ರಗಳಲ್ಲೂ ಮುನ್ನಡಿಗಾಗಿ ಶ್ರಮಿಸಿದರು. ಜವಾಹರಲಾಲ ನೆಹರೂ ಅವರಿಗೆ  ರಾಷ್ಟ್ರದ ಅತ್ಯುನ್ನತ ಪ್ರಶಸ್ತಿ ಭಾರತರತ್ನ ನೀಡಲಾಯಿತು. ತಮ್ಮ 74 ನೇ ವಯಸ್ಸಿನಲ್ಲಿ 1964 ಮೇ 27 ರಂದು ನಿಧನಹೊಂದಿದರು . ಇಡೀ ರಾಷ್ಟ್ರವೇ ಶೋಕದಲ್ಲಿ ಮುಳುಗಿತು. ಸ್ವಾತಂತ್ರ್ಯಕ್ಕಾಗಿ ಹೋರಾಡಿ ದೇಶದ ಪ್ರಗತಿಗೆ ಶ್ರಮಿಸಿದ, ಮಕ್ಕಳ ನೆಚ್ಚಿನ ಚಾಚಾ ನೆಹರೂ ಇತಿಹಾಸದ ಪುಟ ಸೇರಿತು.

**– ನಾಗರಾಜನಾಯಕ ಡಿ.ಡೊಳ್ಳಿನ**
ಕೊಪ್ಪಳ

# ಸ್ವ ಉದ್ಯೋಗಕ್ಕಾಗಿ ಇಂದೇ ಅರ್ಜಿ ಸಲ್ಲಿಸಿ

## ನಗರಸಭೆ ಪೌರಾಯುಕ್ತರು ಹೇಳಿಕೆ । 18 ರಿಂದ 45 ವರ್ಷದೊಳಗಿನವರು ಅರ್ಹರು

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ನಗರಸಭೆಯಿಂದ 2023–24ನೇ ಸಾಲಿನ ವಿವಿಧ ಕಾರ್ಯಕ್ರಮದಡಿ ಅರ್ಜಿ ಆಹ್ವಾನಿಸಲಾಗಿದೆ.

ನಗರಸಭೆ ವ್ಯಾಪ್ತಿಯಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ನಿರುದ್ಯೋಗಿ ಮಹಿಳಾ ಮತ್ತು ಪುರುಷ ಫಲಾನುಭವಿಗಳಿಗೆ ಕೇಂದ್ರ ಪುರಸ್ಕೃತ ಯೋಜನೆಯಡಿ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ–ನಲ್ಮ್) ಯೋಜನೆಯಡಿಯಲ್ಲಿ ಉಪಘಟಕವಾದ ಉದ್ಯೋಗ (ಶೇ.7ರ ಮೇಲೆ ಬಡ್ಡಿ ಸಹಾಯಧನ), ಸ್ವಯಂ ಉದ್ಯೋಗ ಕಾರ್ಯಕ್ರಮ (ಗುಂಪು) ಹಾಗೂ ಸ್ವ–ಸಹಾಯ ಗುಂಪುಗಳ ರಚನೆಯ ಕಾರ್ಯಕ್ರಮದಡಿ ಸೌಲಭ್ಯ ಒದಗಿಸಲಾಗುತ್ತಿದೆ.

**ಮಂಜೂರು ಮಾಡುವ ಸಹಾಯಧನ:**
ವೈಯಕ್ತಿಕವಾಗಿ ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಒಟ್ಟು ಯೋಜನಾ ವೆಚ್ಚ ರೂ.2 ಲಕ್ಷ ಇರುತ್ತದೆ. ವೈಯಕ್ತಿಕ ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಉದ್ಯೋಗದ ಸ್ಥಾಪನೆಗಾಗಿ ಬ್ಯಾಂಕ್ ಸಾಲದ ಮೇಲೆ ಬಡ್ಡಿದರ (ಶೇ.7ಕ್ಕಿಂತ ಮೇಲೆ ಬಡ್ಡಿ ಸಹಾಯ ಧನ) (ಇಂಟರೆಸ್ಟ್ ಸಬ್ಸಿಡಿ ವೆಬ್ ಪೋಸ್ಟಲ್ ಮೂಲಕ) ದೊರೆಯುತ್ತದೆ. ಈ ಇಂಟರೆಸ್ಟ್ ಸಬ್ಸಿಡಿಯನ್ನು ಕಾಲಕಾಲಕ್ಕೆ ಸರಿಯಾಗಿ ಸಾಲವನ್ನು ಮರುಪಾವತಿಸುವ ವ್ಯಕ್ತಿಗಳಿಗೆ ಮಾತ್ರ ನೀಡಲಾಗುವುದು.

ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ ವಾಸವಾಗಿದ್ದು, ಕುಟುಂಬದ ವಾರ್ಷಿಕ ಆದಾಯ ರೂ. 23,214 ಹೊಂದಿರಬೇಕು. 18 ರಿಂದ 45 ವರ್ಷದೊಳಗಿರಬೇಕು. ಸ್ವಯಂ ಉದ್ಯೋಗ ಮಾಡಲು ಆಸಕ್ತಿ ಹೊಂದಿರಬೇಕು. ಯಾವುದೇ ಬ್ಯಾಂಕ್ ನಲ್ಲಿ ಸಾಲ ಹೊಂದಿರಬಾರದು. ಮಂಜೂರಾದ ಸಾಲವನ್ನು ಕಡ್ಡಾಯವಾಗಿ ಮೂರು ವರ್ಷದಲ್ಲಿ ಪಾವತಿಸುವ ಅರ್ಹತೆ ಹೊಂದಿರಬೇಕು. ಯೋಜನೆಯಡಿ 41 ಗುರಿ ನಿಗದಿತಪಡಿಸಲಾಗಿದೆ.

ಆಸಕ್ತರು ಪ್ರಸ್ತಕ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಯೋಜನಾ ವರದಿ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಚುನಾವಣೆ ಗುರುತಿನ ಚೀಟಿ, ಕೈಗೊಳ್ಳುವ ಉದ್ಯೋಗದ ಬಗ್ಗೆ ತರಬೇತಿ ಪಡೆದ ಪ್ರಮಾಣ ಪತ್ರ, ವಿದ್ಯಾರ್ಹತೆ ಪ್ರಮಾಣ ಪತ್ರ, ಇತ್ತೀಚಿನ ಭಾವಚಿತ್ರ, ರೂ.20 ಛಾಪಾ ಕಾಗದ ಮೇಲೆ ನಲ್ಮ್ ಯೋಜನೆಯ ಘೋಷಣಾ ಪ್ರಮಾಣ ಪತ್ರವನ್ನು ನೋಟರಿಯಿಂದ ದೃಢೀಕರಿಸಿದ ಪ್ರತಿ, ವ್ಯಯಕ್ತಿಕ ಉಳಿತಾಯ ಖಾತೆಯ ಬ್ಯಾಂಕ್ ಪಾಸ್ ಬುಕ್ ಪ್ರತಿಯೊಂದಿಗೆ ನ.21ರ ಒಳಗಾಗಿ ನಗರಸಭೆ ಕಾರ್ಯಾಲಯಕ್ಕೆ ಖುದ್ದಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಅಭ್ಯರ್ಥಿಗಳು ಕಡ್ಡಾಯವಾಗಿ ತಮ್ಮ ವಾರ್ಡ್ ವಾರು ನಿಗದಿಪಡಿಸಿದೆ ಸೇವಾ ವಲಯದ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಪ್ರತಿ ಲಗತ್ತಿಸಬೇಕು. ವಾರ್ಡ್ ವಾರು ನಿಗದಿಪಡಿಸಿದ ಸೇವಾ ವಲಯದ ಬ್ಯಾಂಕ್ ಗಳಿಗೆ ಮಾತ್ರ ಅರ್ಜಿಗಳನ್ನು ಕಳುಹಿಸಲಾಗುವುದು. ಅಪೂರ್ಣವಾಗಿ ಭರ್ತಿಮಾಡಲಾದ ಹಾಗೂ ದೃಢೀಕೃತ ದಾಖಲೆಗಳಿಲ್ಲದ ಮತ್ತು ತಡವಾಗಿ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ನಗರಸಭೆಯ ಸಿ.ಎ.ಓ (ಸಮುದಾಯ ವ್ಯವಹಾರ ಅಧಿಕಾರಿ) ಇವರನ್ನು ಸಂಪರ್ಕಿಸಬಹುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ.15ರಿಂದ ವಿವಿಧ ನ್ಯಾಯಾಲಯಗಳು ಕಾರ್ಯಾರಂಭ

**ಹಂಪಿ ಟೈಮ್ಸ್ ಬಳ್ಳಾರಿ :** ನಗರದ ಹಳೆಯ ಜಿಲ್ಲಾ ನ್ಯಾಯಾಲಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ನ್ಯಾಯಾಲಯಗಳು ಸ್ಥಳಾಂತರಗೊಂಡು, ಇದೇ ನವೆಂಬರ್ 15 ರಿಂದ ನಗರದ ತಾಳೂರು ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಕಾರ್ಯ ನಿರ್ವಹಿಸಲಿವೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ–1 ನ್ಯಾಯಾಲಯ, 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, 4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು (ವಾಣಿಜ್ಯ ನ್ಯಾಯಾಲಯ), ಕೌಟುಂಬಿಕ ನ್ಯಾಯಾಲಯವು ಸೇರಿದಂತೆ ನ.15ರಿಂದ ನಗರದ ತಾಳೂರು ರಸ್ತೆಯ ನೂತನ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಿವೆ ಎಂದು ತಿಳಿಸಿದ್ದಾರೆ.

## AFFIDAVIT

I,**RENUKA w/o No.JC305785X Rank: Sub S.Gopala Krishna Rao,** Residing at Sainika 1st ward, Near nagareshwara Temple, Chittawadigi, Hosapete-583201, Vijayanagara Dist.
I have changed my name from **RENUKA to S.RENUKA** duw to inadvertence. That my date of birth is 01.08.1969(First August Ninteen Sixty Nine) all the above names are same and belongs to me only. vide affidavit dated 09-11-2023 before Notary H.P.Kallam Bhat at Hosapete-583201

# ಕಲಾವಿದರ ಬದುಕಿಗೆ ಕಲೆಯೇ ಆಸರೆ

## ನೃತ್ಯ ಶಿಕ್ಷಕಿ ಅಂಜಲಿ ಹೇಳಿಕೆ । ಭರತನಾಟ್ಯ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯತೆಯ ಕಲೆ

■ **ಹಂಪಿ ಟೈಮ್ಸ್ ಕೊಟ್ಟೂರು**

ಭಾರತೀಯ ಸುಸಂಸ್ಕೃತಿಯ ವೈಶಿಷ್ಟ್ಯತೆಯ ಕಲೆ, ಭರತ ನಾಟ್ಯ ಈ ಸಂಸ್ಕೃತಿ, ಪರಂಪರೆ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಎಲ್ಲರೂ ಮುಂದಾಗಬೇಕು ಎಂದು ಹೊಸಪೇಟೆಯ ಭರತ ನಾಟ್ಯ ಕಲಾವಿದೆ ಮತ್ತು ನೃತ್ಯ ಶಿಕ್ಷಕಿ ಎಸ್.ಅಂಜಲಿ ಹೇಳಿದರು.

ಪಟ್ಟಣದ ಶ್ರೀ ಬನಶಂಕರಿ ದೇವಾಲಯ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ, ಕಲ್ಪತರು ಕಲಾ ಟ್ರಸ್ಟ್ ನ ಎರಡನೇ ವಾರ್ಷಿಕೋತ್ಸವದ ಸವಿನೆನಪಿಗಾಗಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಲ್ಪತರು ಕಲಾ ಟ್ರಸ್ಟ್ ಅಧ್ಯಕ್ಷ ಕೊಟ್ರೇಶ್ ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿವಿಧ ಯೋಜಿತ ಕಾರ್ಯಕ್ರಮಗಳ ಮೂಲಕ, ಗ್ರಾಮೀಣ ಪ್ರದೇಶಗಳಲ್ಲಿನ ಸ್ಥಳೀಯ ಕಲಾವಿದರನ್ನು ಗುರುತಿಸಿ,ವೇದಿಕೆ ಕಲ್ಪಿಸಿ, ಕಲೆಗಳನ್ನು ಪ್ರದರ್ಶನ ನೀಡಲು ಉತ್ತೇಜಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಶಿಕ್ಷಕಿ ರಾಜೇಶ್ವರಿ ಮಾತನಾಡಿದರು. ಶ್ರೀ ಅಂಜಲಿ ಭರತನಾಟ್ಯ ಕಲಾ ಕೇಂದ್ರ ಹೊಸಪೇಟೆ ತಂಡದಿಂದ ಸಮೂಹ ಭರತನಾಟ್ಯ ಪ್ರದರ್ಶನ ನಡೆಯಿತು.ಎಸ್ ಅಂಜು ಅಧ್ಯಕ್ಷರು ಶ್ರೀ ಅಂಜಲಿ ಭರತನಾಟ್ಯ ಕಲಾ ಕೇಂದ್ರ ಹೊಸಪೇಟೆ ಇವರಿಗೆ ಕಲ್ಪತರು ಟ್ರಸ್ಟ್ ಪ್ರಶಸ್ತಿ ನೀಡಿ ಗೌರವಿಸಿದರು.



ಇದೇ ವೇಳೆ ಅಂಗನವಾಡಿ ಶಿಕ್ಷಕಿ ಕೆ.ಅಕ್ಕಮಹಾದೇವಿ ,ಸಮುದಾಯ ಆರೋಗ್ಯ ಕೇಂದ್ರ ಶುಶ್ರೂಷಾಕಿ ರೇಖಾ ಸಿ, ಶ್ರೀ ಬನಶಂಕರಿ ದೇವಿ ಅರಚಕರು ಮೂಗಣ್ಣ, ಕಂದಾಯ ಇಲಾಖೆ ಗ್ರಾಮ ಸೇವಕರು ಕೆ ನಿಂಗನಗೌಡ ,ಕು.ಪೂರ್ಣೀಮ ಪವರ್ ಹವ್ಯಾಸ ಕಲಾವಿದರು ಹಾಗೂ ಚಲನಚಿತ್ರ ನಟಿ ಬೆಂಗಳೂರು ಇವರಿಗೆ ಸನ್ಮಾನಿಸಿ ಗೌರವಿಸಿದರು.

ವೇದಿಕೆಯಲ್ಲಿ ಮೊರಿಗೇರಿ ಮಂಜುನಾಥ್ ಕ.ರಾ.ಚು ಸಾ ,ಪ .ಅಧ್ಯಕ್ಷ, ಮೈದೂರು ಶೈಲಜಾ ರಾಜೀವ್ ಪ ಪಂ ಸದಸ್ಯರು,ಮೈದೂರು ಕೊಟ್ರೇಶಪ್ಪ, ಪೂರ್ಣೀಮ ,ಎಂ ಎಂ ಜೆ ಗಿರಿಜಾ ಚಂದ್ರಜ್ಜ , ಮೈದೂರು ಸುನಿತಾ, ಪ್ರವೀಣ್, ಕೆ ಎಸ್ ನಾಗರಾಜ್ ಗೌಡ ಇದ್ದರು. ಪ್ರಾರ್ಥನೆ ಸಿ ಎಂ ನಂದಿತಾ ನೆರವೇರಿಸಿದರು, ಅರಮನೆ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು, ಎಂ ಮಂಜುನಾಥ ವಂದಿಸಿದರು.

# ಗುರುಕುಲ ಕಲಾ ಶ್ರೀ ರತ್ನ ಪ್ರಶಸ್ತಿಗೆ ಹಾಸ್ಯ ಕಲಾವಿದ ಶಿವರಾಜ ಆಯ್ಕೆ

## ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಪ್ರಶಸ್ತಿ ಪ್ರದಾನ



■ **ಹಂಪಿ ಟೈಮ್ಸ್ ಹೊಸಪೇಟೆ**

ತುಮಕೂರಿನ ಶ್ರೀ "ಗುರುಕುಲ ಕಲಾ ಪ್ರತಿಷ್ಠಾನ" (ರಿ) ಕೇಂದ್ರ ಸಮಿತಿ ವತಿಯಿಂದ ರಂಗಭೂಮಿ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಕೊಡಮಾಡುವ ಪ್ರಸಕ್ತ ಸಾಲಿನ ಪ್ರತಿಷ್ಠಿತ "ಗುರುಕುಲ ಕಲಾ ಶ್ರೀ ರತ್ನ" ಪ್ರಶಸ್ತಿಗೆ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊಸ ಅಮರಾವತಿಯ,ಸಕಲ ಕಲಾ ವಲ್ಲಭ,ಮಿಮಿಕ್ರಿ ಧ್ವನಿಮಾಂತ್ರಿಕ,ಗಾಯಕ, ಹಾಸ್ಯ ಭಾಷಣಾಕಾರ, ಕವಿ, ಚುಟುಕು ಬರಹಗಾರ, ಚಿತ್ರ ಕಲಾವಿದ, ನಿರೂಪಕ ಹಾಗೂ ಶಿಕ್ಷಕ ಕಲಾವಿದರಾದ ಶಿವರಾಜ್ ವಿ. ಇವರು ಆಯ್ಕೆಯಾಗಿದ್ದಾರೆ. ಇದೇ ತಿಂಗಳು ನವೆಂಬರ್ 18 ಮತ್ತು 19 ರಂದು ವಿಜಯನಗರ ಜಿಲ್ಲೆಯ ಹಂಪಿಯ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಸುವರ್ಣ ಕರ್ನಾಟಕ ಸಂಭ್ರಮದ ಸವಿನೆನಪಿಗಾಗಿ ನಡೆಯಲಿರುವ ಅಖಿಲ ಭಾರತ 3ನೇ ಗುರುಕುಲ ಕಲಾ ಸಮ್ಮೇಳನದಲ್ಲಿ ಹೊಸಪೇಟೆಯ ಶ್ರೀ ಕೊಟ್ಟೂರು ಮಠದ ಬಸವಲಿಂಗ ಮಹಾ ಸ್ವಾಮಿಗಳ ಸಾನ್ನಿಧ್ಯದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಾತೆ ಮಂಜಮ್ಮ ಜೋಗತಿ ಅವರ ಗೌರವ ಉಪಸ್ಥಿತಿಯಲ್ಲಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA